ಓ.ಎಸ್ 233/2003 ಪಿ.ಡಬ್ಲೂ-3

ಸಾಕ್ಷಿಯನ್ನು ದಿನಾಂಕ 23-03-2022 ರಂದು ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ**

7. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

ಈಗ ನಾನು ನಿಪಿ-21 ಒಟ್ಟು ಮೊಕ್ತಿಯಾರ ಪತ್ರ ನೋಡುತ್ತಿದ್ದು ಅದರ ಮೇಲೆ ಸದರಿಯವರ ಗುರುತು ಇದೆ ಎಂದು ಸಹಿ ಮಾಡಿದ್ದು ಈಗ ಆ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-22 ಒಟ್ಟು ಮೊಕ್ತಿಯಾರ ಪತ್ರ ನೋಡುತ್ತಿದ್ದು ಅದರ ಮೇಲೆ ಸದರಿಯವರ ಗುರುತು ಇದೆ ಎಂದು ಸಹಿ ಮಾಡಿದ್ದು ಈಗ ಆ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ.2 ರಿಂದ 5 ಪರ ವಕೀಲರಿಂದ;-**

8. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿದ್ದೇನೆ. ನಾನು ಆ ಜಿ ಪಿ ಎ ಗಳನ್ನು ಡ್ರಾಫ್ಟ ಮಾಡಿಲ್ಲ ಆದರೆ ಅದನ್ನು ಮಾಡಿದವರ ಸಹಿಗಳನ್ನು ಗುರುತಿಸಿದ್ದೇನೆ. ಅದರ ಮೇಲೆ ಎಷ್ಟು ಜನ ಸಹಿ ಮಾಡಿದ್ದಾರೆಂದರೆ ಈಗ ನನಗೆ ನೆನಪಿಲ್ಲ ಆದರೆ ದಾಖಲೆ ನೋಡಿ ಹೇಳಬಲ್ಲೆ. ಆ ಜಿ ಪಿ ಎ ಗಳನ್ನು ಒಂದನ್ನು 2 ಎಕರೆ ಜಮೀನಿಗೆ ಮತ್ತೊಂದನ್ನು 4 ಎಕರೆ ಜಮೀನಿಗೆ ಮಾಡಿಕೊಡಲಾಗಿತ್ತು. ಜ್ಯೋತಿಬಾ ಬೆನಕಟ್ಟಿ ಇವರು ಅವುಗಳ ಮೇಲೆ ಸಹಿ ಮಾಡಲು ನನಗೆ ವಿನಂತಿಸಿಕೊಂಡಿದ್ದರು. ನೋಟರಿಯವರ ಮುಂದೆ ಯಾರ್ಯಾರು ಬಂದಿದ್ದರು ಎಂದು ಕೇಳಿದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಆ ಜಿ ಪಿ ಎ ಮೇಲೆ ಜಗದೀಶ ಕಲ್ಯಾಣಶೆಟ್ಟಿ ಮತ್ತು ಜಯಪ್ರಕಾಶ ತೆಂಗಿನಕಾಯಿ ಇವರ ಸಹಿಗಳು ಅಂದರೆ ಯಾರಿಗೆ ಅವುಗಳನ್ನು ಮಾಡಿಕೊಟ್ಟಿದ್ದಾರೆ ಅವರ ಸಹಿಗಳು ಇಲ್ಲ ಅಂದರೆ ನನಗೆ ಗೊತ್ತಿಲ್ಲ. ಆ ದಿನ ಸಿ ವಿ ರಟ್ಟಿಹಳ್ಳಿ ವಕೀಲರು ಅಲ್ಲಿ ಇರಲಿಲ್ಲ ಅಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ನಿಖರವಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವೆಯನ್ನು ವಾದಿ ಪ್ರತಿವಾದಿಗಳ ನಡುವೆ ಆಸ್ತಿಯ ಬಗ್ಗೆ ತಕರಾರು ಬಂದ ಕಾರಣ ಹಾಕಲಾಗಿದೆ. ಆ ಜಿ ಪಿ ಎ ಗಳು ಯಾವಾಗ ನೋಟರೈಜಡ

ಆದವು ಎಂದು ನನಗೆ ನೆನಪಿಲ್ಲ. ನಾನೇನು ಖರೀದಿ ಕರಾರು ಪತ್ರಕ್ಕೆ ಸಹಿ ಎಂದು ಸಹಿ ಮಾಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳು ಇವೆ ಮತ್ತು ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂತಾ ಸೂಚಿಸುವ ನಿಮ್ಮ ಸಲಹೆಗಳು ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ನಂ,13 ರ ಪರವಾಗಿ ವಕೀಲರು ಸಮಯ ಕೋರಿದರು, 3-00 ಗಂಟೆಯ ವರೆಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.

ಓ.ಎಸ್ 233/2003 ಪಿ.ಡಬ್ಲೂ-1

ಸಾಕ್ಷಿಯನ್ನು ಮಧ್ಯಾಹ್ನ 03-00 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ನಂ,13 ರ ಪರ ವಕೀಲರಿಂದ-**

ನಾನು 1978 ರಲ್ಲಿ ವಕೀಲ ವೃತ್ತಿ ಆರಂಭಿಸಿದ್ದೆ. ಹುಬ್ಬಳ್ಳಿ ಸಂಘದಲ್ಲಿ ವಕೀಲನಾಗಿದ್ದೆ. ಕಳೆದ 6 ತಿಂಗಳಿನಿಂದ ನಾನು ಪ್ರಾರ್ಕಟಿಸ ಬಿಟ್ಟಿದ್ದೇನೆ. ನನಗೆ ಈಗ 69 ವರ್ಷ ವಯಸ್ಸು. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ವಾದಿಯವರು ಕರೆಸಿದ್ದಾರೆ. ನನಗೆ ಜಿ ಪಿ ಎ ಗಳ ಬಗ್ಗೆ ಮಾತ್ರ ಗೊತ್ತಿದೆ. ಅವುಗಳನ್ನು ಯಾವಾಗ ಮಾಡಿದ್ದಾರೆ ಈಗ ನೆನಪಿಲ್ಲ.

ಆ ಜಿ ಪಿ ಎ ಗಳನ್ನು ಜಮೀನು ಮಾರಾಟ ಮಾಡಲು ಮಾಲೀಕರು ಮಾಡಿಕೊಟ್ಟಿದ್ದರು. ಆ ಜಿ ಪಿ ಎ ಗಳನ್ನು ಮಾಡಲು ಬೆನಕಟ್ಟಿ ಕುಟುಂಬದ ಎಲ್ಲಾ ಸದಸ್ಯರು ಬಂದಿದ್ದರು. ಆದರೆ ನಿರ್ದಿಷ್ಟವಾಗಿ ಎಷ್ಟು ಬಂದಿದ್ದರು ಎಂದು ನನಗೆ ನೆನಪಿಲ್ಲ. ಆ ಕುಟುಂಬದ ಸದಸ್ಯರು ನನ್ನ ಮುಂದೆ ಆ ಜಿ ಪಿ ಎ ಗಳಿಗೆ ಸಹಿ ಮಾಡಿದ್ದರು. ಆ ಜಿ ಪಿ ಎ ಗಳನ್ನು ಬೆನಕಟ್ಟಿಯವರು ತಯಾರು ಮಾಡಿದ್ದರು. ಜಿ ಪಿ ಎ ಮಾಡಿಕೊಳ್ಳಲು ಸುಭದ್ರಾ ಅಶೋಕ ಮೊಟೆ ಇವಳು ಸಹ ಬಂದಿದ್ದಳು. ಅದೇ ರೀತಿ ಮಲ್ಲಪ್ಪ ಕೃಷ್ಣಪ್ಪ ಬೆನಕಟ್ಟಿ ಇವರು ಸಹ ಬಂದಿದ್ದರು. ಆ ಜಿ ಪಿ ಎ ವಿಷಯ ಮಾತ್ರ ನನಗೆ ಗೊತ್ತಿದೆ ಅದರೆ ಅದರಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ. ಆ ಜಮೀನುಗಳನ್ನು ಕನವರ್ಟ ಮಾಡಲು ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಹ ಅದರಲ್ಲಿ ಬರೆಯಲಾಗಿತ್ತು. ಎರಡು ಜಿ ಪಿ ಎ ಏಕೆ ಮಾಡಿದ್ದರು ನನಗೆ ನೆನಪಿಲ್ಲ. 1973 ರಿಂದಲ್ಲೇ ನನಗೆ ಜ್ಯೋತಿಬಾ ಬೆನಕಟ್ಟಿ ಇವರ ಪರಿಚಯ ಇತ್ತು ಅವರ ಮುಖಾಂತರ ಉಳಿದವರ ಪರಿಚಯ ಸಹ ಇತ್ತು. ಆ ಜಿ ಪಿ ಎ ಮಾಡುವ ಕಾಲಕ್ಕೆ ಆ ಜಮೀನುಗಳನ್ನು ಕನವರ್ಟ ಮಾಡುವ ಬಗ್ಗೆ ಮತ್ತು ಮಾರಾಟ ಮಾಡುವ ಬಗ್ಗೆ ಮಾತುಕತೆ ಆಗಿತ್ತು. ಖರೀದಿ ಕರಾರು ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಜಿ ಪಿ ಎ ಗಳಿಗೆ ಕೇವಲ ಸಹಿ ಮಾಡು ಎಂದಿದ್ದರು ಆ ಕಾರಣ ನಾನು ಸಹಿ ಮಾಡಿದ್ದೇನೆ ಮತ್ತು ಅದರಲ್ಲಿ ಬರೆದ ವಿಷಯಗಳನ್ನು ನನಗೆ ತಿಳಿಸಿರಲಿಲ್ಲ ಅಂದರೆ ಈಗ ನನಗೆ ಅದರ ಬಗ್ಗೆ ನೆನಪಿಲ್ಲ. ಆ ಕಾಲಕ್ಕೆ ರಟ್ಟಿಹಳ್ಳಿ ವಕೀಲರು ಹಾಜರ ಇರದಿದ್ದರೂ ಸಹಿತ ಹಾಜರಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು ಅಂದರೆ ಮಾಲೀಕರು ವಾದಿಯರ ಬಗ್ಗೆ ಪ್ರತಿಕೂಲವಾದ ಬಗ್ಗೆ ಅವರು ಈ ದಾವೆಯನ್ನು ದಾಖಲ ಮಾಡಿದಾಗ ನನಗೆ ಗೊತ್ತಾಗಿದೆ. ಈ ದಾವೆಯನ್ನು ಯಾವ ವರ್ಷ ಹಾಕಿದ್ದಾರೆಂದು ನನಗೆ ಮಾಹಿತಿ ಇಲ್ಲ. ನನಗೆ ಏನೂ ಮಾಹಿತಿ ಗೊತ್ತಿಲ್ಲದಿದ್ದರೂ ಸಹಿತ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)ಚ

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ, ಹುಬ್ಬಳ್ಳಿ.